ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಸಿ.ಜೆ.ಎಂ.,
ನ್ಯಾಯಾಲಯ, ಚಿಕ್ಕಮಗಳೂರು.

<u>ಸಿ.ಸಿ.67/2021</u>

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಹರೀಶ್ ಕುಮಾರ್ ಎಲ್.ಬಿ | ಡಿ.ಡಬ್ಲ್ಯೂ.1 |
| ತಂದೆಯ ಹೆಸರು | : | ಬಸಪ್ಪ ಕೆ. | |
| ವಯಸ್ಸು | : | 42 ವರ್ಷ | |
| ವೃತ್ತಿ | : | Ex Police | |
| ವಾಸ | : | ಮೈಸೂರು | |

<u>ದಿನಾಂಕಃ 06-06-2026 ರಂದು ಪ್ರಮಾಣ ವಚನ ಭೋದಿಸಲಾಯಿತು.</u>

<u>ಮುಖ್ಯ ವಿಚಾರಣೆಃ ಆರೋಪಿ ಪರ ವಕೀಲರಿಂದಃ-</u>

ಚಂದ್ರಶೇಖರ್ ಮತ್ತು ನರೇಂದ್ರ ಎನ್ನುವವರ ನಡುವೆ ಶೇರ್ ಟ್ರೇಡಿಂಗ್ ವ್ಯವಹಾರ ನಡೆದಿತ್ತು. ಸದರಿ ಚಂದ್ರಶೇಖರ್ ಮತ್ತು ನರೇಂದ್ರರವರ ನಡುವೆ ಹಣದ ವಿಚಾರದಲ್ಲಿ ಗಲಾಟೆ ನಡೆಯುತ್ತಿತ್ತು. ಆ ಸಮಯದಲ್ಲಿ ಚಿಕ್ಕಮಗಳೂರು ಎಸ್.ಪಿ ಅಣ್ಣಾಮಲೈರವರು ಚಂದ್ರಶೇಖರ್ ರವರನ್ನು ಎಸ್.ಪಿ ಕಛೇರಿಗೆ ಕರೆದಿದ್ದರು. ನನ್ನ ಮೂಲ ಊರು ಕಡೂರು ಆಗಿದ್ದುದರಿಂದ ಮತ್ತು ನಾನು ಪೊಲೀಸ್ ಆಗಿ ಚಿಕ್ಕಮಗಳೂರಿನಲ್ಲಿ ಕೆಲಸ ಮಾಡಿದ್ದುದರಿಂದ ನನ್ನ ಅಣ್ಣ ಅಂದರೆ ನನ್ನ ಅತ್ತೆ ಮಗನಾದ ಚಂದ್ರಶೇಖರ್ ನನ್ನನ್ನು ಚಿಕ್ಕಮಗಳೂರು ಎಸ್.ಪಿ ಕಛೇರಿಗೆ ಕರೆದಿರುತ್ತಾರೆ. ಆ ಸಮಯದಲ್ಲಿ ಅದೇ ಮೊದಲಬಾರಿಗೆ ನಾನು ನರೇಂದ್ರ ಹಾಗೂ ಅವರ ಹೆಂಡತಿಯಾದ ಉಷಾರವರನ್ನು ನೋಡಿರುತ್ತೇನೆ.

ಸದರಿ ಎಸ್.ಪಿ ಕಛೇರಿಯಲ್ಲಿ ಅಣ್ಣಾಮಲೈರವರು ನಮ್ಮನ್ನು ಒಳಗೆ ಕರೆದಿರುತ್ತಾರೆ. ಅವರು ಚಂದ್ರಶೇಖರ್ ರವರನ್ನು ವ್ಯವಹಾರದ ಬಗ್ಗೆ ವಿಚಾರಿಸಿರುತ್ತಾರೆ. ಆಗ ಚಂದ್ರಶೇಖರ್ ರವರು ಎಸ್.ಪಿ ರವರಿಗೆ ಶೇರ್ ಟ್ರೇಡಿಂಗ್ ಬಗ್ಗೆ ಮಾಹಿತಿಯನ್ನು ನೀಡಿರುತ್ತಾರೆ. ನಾನು ಚಂದ್ರಶೇಖರ್ ರವರ ಜೊತೆಗೆ ಇದ್ದುದರಿಂದ ನನ್ನ ಬಳಿ ಎಸ್.ಪಿ ರವರು ನಾನು ಯಾರು ಎಂದು ವಿಚಾರಿಸಿರುತ್ತಾರೆ. ಆಗ ನಾನು ಮಾಜಿ ಪೊಲೀಸ್ ಇರುತ್ತೇನೆ ಎಂದು ತಿಳಿಸಿರುತ್ತೇನೆ. ಆಗ ನನ್ನನ್ನು ಹಾಗೂ ಚಂದ್ರಶೇಖರ್ ರವರನ್ನು ಹೊರಗೆ ಇರಿ ಎಂದು ಎಸ್.ಪಿ ರವರು ಕಳುಹಿಸಿರುತ್ತಾರೆ. 5 ನಿಮಿಷ ಒಳಗೆ ಎಸ್.ಪಿ ರವರು ಉಷಾ ಹಾಗೂ ನರೇಂದ್ರರವರ ಜೊತೆಗೆ ಮಾತನಾಡಿದ್ದು ಏನು ಮಾತನಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಂತರ ಮತ್ತೆ ನಮ್ಮನ್ನು ಒಳಗೆ ಕರೆದಿರುತ್ತಾರೆ. ನನ್ನ ಬಳಿ ಎಸ್.ಪಿ ರವರು ಏನು ವ್ಯವಹಾರ ನಡೆದಿದೆ ಅದಕ್ಕೆ ನೀನೇ ಸಾಕ್ಷಿಯಾಗಬೇಕು, ನೀನೇ ಅಗ್ರಿಮೆಂಟ್ ಮಾಡಿ ನೀನೇ ಚೆಕ್ ಕೊಡಬೇಕು ಎಂದು ಹೇಳಿ ಒಬ್ಬ ಕಾನ್ಸ್ ಟೇಬಲ್ ಅನ್ನು ನೇಮಿಸಿರುತ್ತಾರೆ. ಆಗ ನಾನು ಚೆಕ್ ನನ್ನ ಬಳಿ ಇಲ್ಲ ಎಂದು ತಿಳಿಸಿದ್ದು ಆಗ ಎಸ್.ಪಿ ರವರು ನನ್ನ ಪೂರ್ವಪರ ವಿಚಾರ ಮಾಡಿ ಸಂಜೆಃ 4 ಗಂಟೆಯ ಒಳಗೆ ಚೆಕ್ ಅನ್ನು ಕೊಡಬೇಕು ಎಂದು ಹೇಳಿರುತ್ತಾರೆ. ಅಲ್ಲದೆ ಕಡೂರು ಪೊಲೀಸ್ ಠಾಣೆಗೆ ಫೋನ್ ಮಾಡಿ, ಅಲ್ಲಿ ಸಬ್ ಇನ್ಸ್ ಪೆಕ್ಟರ್ ಗೆ ಹೇಳಿ ಒಬ್ಬ ಕಾನ್ಸ್ ಟೇಬಲ್ ಅನ್ನು ಅಲ್ಲಿಯೂ ನೇಮಿಸಿರುತ್ತಾರೆ. ನಂತರ ನಾನು ನನ್ನ ಸ್ವಂತ ಊರು ಕಡೂರು ಆಗಿದ್ದುದರಿಂದ ಕಡೂರಿಗೆ ಹೋಗಿ ಮನೆಯಲ್ಲಿ ಇದ್ದ ನನ್ನ ಚೆಕ್ ಅನ್ನು ತಂದು ಪೊಲೀಸ್ ರವರಿಗೆ ತೋರಿಸಿ ನಂತರ ಚಿಕ್ಕಮಗಳೂರಿಗೆ ಬಂದು

ಅಗ್ರಿಮೆಂಟ್ ಅನ್ನು ಮಾಡಿಸಿ ಚೆಕ್ ಅನ್ನು ನರೇಂದ್ರ ಮತ್ತು ಉಷಾರವರಿಗೆ ನೀಡಿರುತ್ತೇನೆ. ಸದರಿ ಚೆಕ್ ಅನ್ನು ನನಗೆ ಬಲವಂತ ಮಾಡಿ ಕೊಡಿಸಲಾಗಿರುತ್ತದೆ. ರವಿ ಬೆಳಗೆರೆ ರವರ ಸಾರಥ್ಯದಲ್ಲಿ ನಡೆಯುವ ಪತ್ರಿಕೆಯಲ್ಲಿ ಕ್ರೈಂ ರಿಪೋರ್ಟರ್ ಆದ ಸುನೀಲ್ ಹೆಗ್ಗರವಳ್ಳಿರವರ ಕಡೆಯಿಂದಲೂ ನನಗೆ ಫೋನ್ ಮಾಡಿಸಿರುತ್ತಾರೆ. ಆಗಿನ ಮೈಸೂರು ಎಂ.ಪಿ ಯಾದ ಪ್ರತಾಪ್ ಸಿಂಹರವರ ಕಡೆಯಿಂದಲೂ ನನಗೆ ಫೋನ್ ಮಾಡಿ ಬೆದರಿಸಿರುತ್ತಾರೆ. ಚಿಕ್ಕಮಗಳೂರು ಎಸ್.ಪಿ.ರವರಾದ ಅಣ್ಣಾಮಲೈರವರಿಗೆ ಪ್ರತಾಪ್ ಸಿಂಹರವರು ಫೋನ್ ಮಾಡಿ ಚೆಕ್ ಅನ್ನು ಕೊಡಿಸುವಂತೆ ಹೇಳಿರುತ್ತಾರೆ. ಈ ವ್ಯವಹಾರಕ್ಕೂ ನನಗೂ ಯಾವುದೇ ಸಂಬಂಧ ಇರುವುದಿಲ್ಲ. ನರೇಂದ್ರ ಹಾಗೂ ಉಷಾರವರ ಕಡೆಯಿಂದ ನಾನು ಯಾವುದೇ ಹಣವನ್ನು ಪಡೆದಿರುವುದಿಲ್ಲ. ನನಗೆ ವಕೀಲರಿಂದ ಯಾವುದೇ ನೋಟೀಸ್ ಬಂದಿರುವುದಿಲ್ಲ. ಉಷಾರವರ ಗಂಡ ಆತ್ಮಹತ್ಯೆ ಮಾಡಿಕೊಂಡಿದ್ದುದರಿಂದ ನನ್ನ ವಿರುದ್ಧ ಭಾರತೀಯ ದಂಡ ಸಂಹಿತೆ ಕಲಂ 306 ರ ಅಡಿಯಲ್ಲಿ ಒಂದು ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತಾರೆ. 2018 ಕ್ಕಿಂತ ಪೂರ್ವದಲ್ಲಿ ನರೇಂದ್ರ ಹಾಗೂ ಚಂದ್ರಶೇಖರ್ ರವರ ನಡುವೆ ಇದ್ದ ದುಡ್ಡಿನ ವ್ಯವಹಾರ ಮುಕ್ತಾಯವಾಗಿರುತ್ತದೆ. 2022 ರಲ್ಲಿ ಕರೋನಾದ ಸಮಯದಲ್ಲಿ ಚಂದ್ರಶೇಖರ್ ರವರು ಮೃತಪಟ್ಟಿರುತ್ತಾರೆ. ನರೇಂದ್ರ ಅಥವಾ ಉಷಾರವರು ನನ್ನನ್ನು ಯಾವತ್ತೂ ಭೇಟಿ ಮಾಡಿ ಮಾತನಾಡಿಸಿರುವುದಿಲ್ಲ. ಸದರಿಯವರು ಚೆಕ್ ಅನ್ನು ನಗದೀಕರಣಕ್ಕೆ ಹಾಕುವ ಬಗ್ಗೆ ನನಗೆ ಹೇಳಿರುವುದಿಲ್ಲ. ಈ ಪ್ರಕರಣದಲ್ಲಿ ಪೊಲೀಸರು ನನ್ನ ವಿರುದ್ಧ ವಾರೆಂಟನ್ನು ತೆಗೆದುಕೊಂಡು

ಕಡೂರಿಗೆ ಬಂದಾಗ ನನ್ನ ಮನೆಯಿಂದ ನನಗೆ ಫೋನ್ ಮಾಡಿದಾಗ ವಿಚಾರ ಗೊತ್ತಾಯಿತು. ನಂತರ ನಾನು ವಕೀಲರ ಮೂಲಕ ಜಾಮೀನು ಪಡೆದುಕೊಂಡು ಠಾಣೆಗೆ ದೂರನ್ನು ನೀಡಲು ಹೋದಾಗ ಈ ಪ್ರಕರಣ ದಾಖಲಾಗಿರುವುದರಿಂದ ದೂರನ್ನು ಪಡೆದುಕೊಳ್ಳಲು ಬರುವುದಿಲ್ಲ ಎಂದು ಹೇಳಿ ನಿರಾಕರಿಸಿರುತ್ತಾರೆ.

ಆದ್ದರಿಂದ ನನ್ನ ವಿರುದ್ಧ ದಾಖಲಿಸಿರುವ ಈ ಪ್ರಕರಣವನ್ನು ವಜಾಗೊಳಿಸಬೇಕಾಗಿ ನಾನು ಪ್ರಾರ್ಥಿಸುತ್ತೇನೆ.

ಪಾಟೀ ಸವಾಲುಃ ಪಿರ್ಯಾದುದಾರ ಪರ ವಕೀಲರಿಂದಃ-

ನಾನು ಬಿ.ಎ ಡಿಗ್ರಿ ಓದಿರುತ್ತೇನೆ. ನಾನು 2007 ರಲ್ಲಿ ಪೊಲೀಸ್ ಇಲಾಖೆಯಲ್ಲಿ ನೌಕರಿಗೆ ಸೇರಿರುತ್ತೇನೆ. ಪೊಲೀಸ್ ಇಲಾಖೆಯಲ್ಲಿ ಪೊಲೀಸ್ ಕಾನ್ಸ್ ಟೇಬಲ್ ಆಗಿ ಸೇರಿರುತ್ತೇನೆ. ನಾನು 2011 ರವರೆಗೆ ಪೊಲೀಸ್ ಕಾನ್ಸ್ ಟೇಬಲ್ ಆಗಿ ಶೃಂಗೇರಿ, ಬೀರೂರು ಮತ್ತು ಪಂಚನಹಳ್ಳಿಯಲ್ಲಿ ಕೆಲಸ ಮಾಡಿರುತ್ತೇನೆ. ಈಗ ನಾನು ಮಾಜಿ ಪೊಲೀಸ್ ಇರುತ್ತೇನೆ. ನನ್ನ ವಿರುದ್ಧ ನ್ಯಾಯಾಲಯದಲ್ಲಿ ಕೇಸು ನಡೆಯುತ್ತಿದ್ದು ನನ್ನನ್ನು ಕೆಲಸದಿಂದ Discharge ಮಾಡಲಾಗಿರುತ್ತದೆ. ನಾನು ಶೃಂಗೇರಿಯಲ್ಲಿ ಕೆಲಸದಲ್ಲಿ ಇರುವಾಗ ಒಂದು ಆಟೋ ಚಾಲಕನ ಮೇಲಿನ ಹಲ್ಲೆಯ ವಿಚಾರದಲ್ಲಿ ಭಾರತೀಯ ದಂಡ ಸಂಹಿತ ಕಲಂ 323 ಮತ್ತು 306 ರಡಿಯಲ್ಲಿ ಕೇಸು ದಾಖಲಾಗಿದ್ದು ಆಗ ನನ್ನ ಪ್ರೊಬೇಷನರಿ ಪೀರಿಯಡ್ ಕ್ಲಿಯರ್ ಆಗಿಲ್ಲ ಎಂದು ಹೇಳಿ ನನ್ನನ್ನು ಕೆಲಸದಿಂದ ತೆಗೆದಿರುತ್ತಾರೆ. ಆ ಸಮಯದಲ್ಲಿ ನನ್ನ ಮೇಲೆ ಎಫ್.ಐ.ಆರ್ ಶೃಂಗೇರಿ ಠಾಣೆಯಲ್ಲಿ ಆಗಿತ್ತು. ಸಾಕ್ಷಿದಾರರು ಸ್ವತಃ ನುಡಿಯುತ್ತಾರೆ ನನ್ನ ಮೇಲೆ ದಾಖಲಿದ್ದ ಕೇಸು ಮುಕ್ತಾಯವಾಗಿರುತ್ತದೆ. ಕೇಸು ಮುಕ್ತಾಯವಾದ

ನಂತರ ನಾನು ವೈಯಕ್ತಿಕ ಕಾರಣಗಳಿಂದ ನಾನು ಕೆಲಸಕ್ಕೆ ಹೋಗಿರುವುದಿಲ್ಲ. ದಿಃ29.08.2018 ರ ಸಿಂಡಿಕೇಟ್ ಬ್ಯಾಂಕ್ ನ ಕೆ.ಆರ್ ಸರ್ಕಲ್ ಮೈಸೂರು ಬ್ರ್ಯಾಂಚ್ ನ ನಿಪಿ-1 ಚೆಕ್ ಅನ್ನು ನಾನು ಸಹಿ ಹಾಕಿ ನರೇಂದ್ರರವರಿಗೆ ನೀಡಿರುತ್ತೇನೆ ಎಂದರೆ ಸರಿ. ಸಾಕ್ಷಿದಾರರು ಸ್ವತಃ ನುಡಿಯುತ್ತಾರೆ ಎಸ್.ಪಿ ರವರು ಬಲವಂತ ಮಾಡಿದ್ದುದರಿಂದ ನೀಡಿರುತ್ತೇನೆ. ನಿಪಿ-1 ರ ಅಕೌಂಟ್ ನನಗೆ ಸಂಬಂಧಪಟ್ಟದ್ದು ಎಂದರೆ ಸರಿ. ನಿಪಿ-1 ರಲ್ಲಿ ಇರುವ ಸಹಿ ನನ್ನದು ಎಂದರೆ ಸರಿ. ಸಾಕ್ಷಿದಾರರು ಸ್ವತಃ ನುಡಿಯುತ್ತಾರೆ ನಿಪಿ-1 ರಲ್ಲಿ ದಿನಾಂಕವನ್ನು ನಾನು ನಮೂದು ಮಾಡಿರುವುದಿಲ್ಲ. ನಿಪಿ-2 ನ್ನು ನರೇಂದ್ರರವರು ಐ.ಡಿ.ಬಿ.ಐ ಬ್ಯಾಂಕ್ ಮೂಲಕ ನಗದೀಕರಣಕ್ಕೆ ಹಾಕಿದಾಗ ನನ್ನ ಖಾತೆಯಲ್ಲಿ ಸಾಕಷ್ಟು ಹಣ ಇಲ್ಲ ಎಂದು ವಾಪಾಸಾಗಿರುತ್ತದೆ ಎಂದರೆ ಸರಿ. ದಿಃ19.09.2018 ರಂದು ನನಗೆ ನರೇಂದ್ರರವರು ಒಂದು ನೋಟೀಸ್ ಅನ್ನು ನೀಡಿರುತ್ತಾರೆ ಎಂದರೆ ಸರಿಯಲ್ಲ. ದಿಃ27.09.2018 ರಂದು ನೋಟೀಸ್ ಅನ್ನು ನರೇಂದ್ರರವರು ನೀಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ನೋಟೀಸ್ 'Addressee left' ಎಂದು ವಾಪಾಸಾಗಿರುತ್ತದೆ ಎಂದರೆ ಸರಿ. ಸಾಕ್ಷಿದಾರರು ಸ್ವತಃ ನುಡಿಯುತ್ತಾರೆ ನಾನು ಮನೆಯನ್ನು ಆಗ ಬದಲಾಯಿಸಿದ್ದೆನು.

ನಾನು ನರೇಂದ್ರರವರಿಗೆ ನಿಪಿ-6 ರ ಪ್ರಕಾರ ಒಂದು ಅಗ್ರಿಮೆಂಟ್ ಅನ್ನು ಮಾಡಿಕೊಟ್ಟಿದ್ದೇನೆ ಎಂದರೆ ಸರಿ. ಸಾಕ್ಷಿದಾರರು ಸ್ವತಃ ನುಡಿಯುತ್ತಾರೆ ಸದರಿ ಅಗ್ರಿಮೆಂಟ್ ಅನ್ನು ಎಸ್.ಪಿ ರವರ ಮೂಲಕ ಬಲವಂತವಾಗಿ ಮಾಡಿಸಲಾಗಿರುತ್ತದೆ. ಸದರಿ ಅಗ್ರಿಮೆಂಟ್ ನ ಪೇಪರ್ ಅನ್ನು ನನ್ನ ಹತ್ತಿರವೇ ಖರೀದಿಸಲಾಗಿರುತ್ತದೆ. ಸದರಿ ನಿಪಿ-6 ಸ್ಟ್ಯಾಂಪ್ ಪೇಪರ್ ಅನ್ನು ನಾನೇ First

party ಎಂದು ದಿಃ31.05.2018 ರಂದು ಖರೀದಿಸಿರುತ್ತೇನೆ ಎಂದರೆ ಸಾಕ್ಷಿದಾರರು ಎಸ್.ಪಿ ರವರು ಪೊಲೀಸ್ ರವರ ಮೂಲಕ ಬಲವಂತವಾಗಿ ಮಾಡಿಸಿರುತ್ತಾರೆ ಎಂದು ನುಡಿಯುತ್ತಾರೆ. ನಿಪಿ-6 ರಾಜೀ ಸಂಧಾನ ಪತ್ರದಲ್ಲಿ ಇರುವ ಸಹಿ ನನ್ನದು ಇರುತ್ತದೆ. ನಿಪಿ-6 ರ 2 ನೇ ಪುಟದಲ್ಲಿ ' 1 ನೇ ಪಾರ್ಟಿಯವರು 2 ನೇ ಪಾರ್ಟಿಯವರಿಂದ ರೂ.20 ಲಕ್ಷವನ್ನು ತಮ್ಮ ವ್ಯವಹಾರದ ಬಾಬ್ತು ಸಾಲ ಪಡೆದಿದ್ದು ಸರಿಯಷ್ಟೆ' ಎಂದು ಇರುತ್ತದೆ ಎಂದರೆ ಸರಿ. ಸದರಿ 20 ಲಕ್ಷವನ್ನು ನಾನು ವಾಪಾಸ್ ಮಾಡಲು ವಿಫಲರಾದಾಗ ನರೇಂದ್ರರವರು ನನ್ನ ವಿರುದ್ಧ ಚಿಕ್ಕಮಗಳೂರು ಜಿಲ್ಲಾ ವರಿಷ್ಠಾಧಿಕಾರಿಯವರ ಕಛೇರಿಯಲ್ಲಿ ದೂರನ್ನು ನೀಡಿರುತ್ತಾರೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ನನ್ನನ್ನು ಜಿಲ್ಲಾ ವರಿಷ್ಠಾಧಿಕಾರಿಯವರ ಕಛೇರಿಗೆ ಕರೆಸಿರುತ್ತಾರೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ನಾನು ರೂ.20 ಲಕ್ಷವನ್ನು ಪಡೆದುಕೊಂಡಿರುವುದನ್ನು ಒಪ್ಪಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ನರೇಂದ್ರರವರಿಗೆ 2 ಚೆಕ್ಕುಗಳನ್ನು ನಾನು ನೀಡಿರುತ್ತೇನೆ ಎಂದರೆ ಸರಿ. ದಿಃ01.08.2018 ಕ್ಕೆ ಮೊದಲ ಚೆಕ್ ಹಾಗೂ ದಿಃ31.12.2018 ಕ್ಕೆ ಎರಡನೇ ಚೆಕ್ ಸಿಂಡಿಕೇಟ್ ಬ್ಯಾಂಕ್, ಕೆ.ಆರ್ ವೃತ್ತ ಶಾಖೆ ಮೈಸೂರಿನ ಸದರಿ 2 ಚೆಕ್ಕುಗಳನ್ನು ನೀಡಿರುತ್ತೇನೆ ಎಂದರೆ ಸಾಕ್ಷಿದಾರರು ನಾನು ಚೆಕ್ ಗಳನ್ನು ನೀಡಿರುತ್ತೇನೆ, ಆದರೆ, ದಿನಾಂಕಗಳನ್ನು ನಾನು ನಮೂದು ಮಾಡಿರುವುದಿಲ್ಲ ಎಂದು ನುಡಿಯುತ್ತಾರೆ.

ದಿಃ01.08.2018 ರ ಮೊದಲ ಚೆಕ್ ಅನ್ನು ನರೇಂದ್ರರವರು ನಗದೀಕರಣಕ್ಕೆ ಹಾಕಿದಾಗ ಸದರಿ ಚೆಕ್ ನನ್ನ ಖಾತೆಯಲ್ಲಿ ಸಾಕಷ್ಟು ಹಣ ಇಲ್ಲ

ಎನ್ನುವ ಹಿಂಬರಹದೊಂದಿಗೆ ವಾಪಾಸಾಗಿರುತ್ತದೆ ಎಂದರೆ ಸರಿ. ದಿಃ31.12.2018 ರ ನಿಪಿ-1 ಚೆಕ್ ಅನ್ನು ನಗದೀಕರಣಕ್ಕೆ ಹಾಕಿದಾಗ ಅದು ನನ್ನ ಖಾತೆಯಲ್ಲಿ ಸಾಕಷ್ಟು ಹಣ ಇಲ್ಲ ಎಂದು ವಾಪಾಸಾಗಿರುತ್ತದೆ ಎಂದರೆ ಸರಿ. ಸದರಿ 2 ಚೆಕ್ಕುಗಳು ಅಮಾನ್ಯಗೊಂಡು ವಾಪಾಸಾದಾಗ ಸದರಿ ನರೇಂದ್ರರವರು ನನ್ನ ಪ್ರಚೋದನೆ ಮೇರೆಗೆ ಆತ್ಮಹತ್ಯೆ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಈ ಬಗ್ಗೆ ನನ್ನ ವಿರುದ್ಧ ಚಿಕ್ಕಮಗಳೂರು ನಗರ ಪೊಲೀಸ್ ಠಾಣೆಯಲ್ಲಿ ದಿಃ15.07.2019 ರಂದು ಕ್ರೈಂ. ನಂ.107/2019 ರಂತೆ ಪ್ರಕರಣವು ದಾಖಲಾಗಿರುತ್ತದೆ ಎಂದರೆ ಸರಿ. ಸದರಿ ಪ್ರಕರಣವು ಮಾನ್ಯ 1 ನೇ ಹೆಚ್ಚುವರಿ ಜಿಲ್ಲಾ ಹಾಗೂ ಸತ್ರ ನ್ಯಾಯಾಲಯದಲ್ಲಿ ಎಸ್.ಸಿ.112/2024 ರಂತೆ ಈಗಲೂ ತನಿಖೆಯಲ್ಲಿ ಇರುತ್ತದೆ ಎಂದರೆ ಸರಿ. ನಾನು ನಿಪಿ-16 ರಂತೆ ತನಿಖಾಧಿಕಾರಿಯವರ ಮುಂದೆ ನನ್ನ ಸ್ವಇಚ್ಛಾ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ದಿಃ19.08.2019 ರಂದು ನಾನು ಪೊಲೀಸರ ಮುಂದೆ ನನ್ನ ಸ್ವ ಇಚ್ಛಾ ಹೇಳಿಕೆ ನೀಡಿದ್ದೇನೆ ಎಂದರೆ ಸಾಕ್ಷಿದಾರರು ನಾನು ಪೊಲೀಸ್ ಠಾಣೆಗೆ ಹೋಗಿದ್ದಾಗ ಪೊಲೀಸರು ನನ್ನಿಂದ ಒಂದು ಖಾಲಿ ಪೇಪರ್ ಗೆ ಸಹಿಗಳನ್ನು ಪಡೆದಿರುತ್ತಾರೆ ಎಂದು ನುಡಿಯುತ್ತಾರೆ. ನಿಪಿ-16 ರಲ್ಲಿ ಇರುವ ಸಹಿ ನನ್ನದು ಇರುತ್ತದೆ. ಸಾಕ್ಷಿದಾರರು ಸ್ವತಃ ನುಡಿಯುತ್ತಾರೆ ಪೊಲೀಸರು ಖಾಲಿ ಪೇಪರ್ ಗೆ ನನ್ನ ಸಹಿ ಪಡೆದಿರುತ್ತಾರೆ. ನಿಪಿ-16 ರಲ್ಲಿ ನಾನು ನರೇಂದ್ರರವರ ಪರಿಚಯ ನನಗೆ 7 ವರ್ಷಗಳ ಹಿಂದೆ ಆಗಿರುತ್ತದೆ ಎಂದು ಹೇಳಿರುತ್ತೇನೆ ಎಂದರೆ ಸರಿಯಲ್ಲ. ಸದರಿಯವರು ಕಾಫಿ ವ್ಯವಹಾರ ಮಾಡುತ್ತಿದ್ದರು ಎಂದು ಹೇಳಿರುತ್ತೇನೆ ಎಂದರೆ ಸರಿಯಲ್ಲ. ಸೈಟ್ ಅನ್ನು ಖರೀದಿಸುವ ಬಗ್ಗೆ

ಮುಂಗಡವಾಗಿ ನರೇಂದ್ರರವರಿಂದ ರೂ.18,50,000/- ಹಣವನ್ನು ನಗದಾಗಿ ಪಡೆದಿರುತ್ತೇನೆ ಎಂದು ಸದರಿ ಸ್ವಇಚ್ಛಾ ಹೇಳಿಕೆಯಲ್ಲಿ ತಿಳಿಸಿರುತ್ತೇನೆ ಎಂದರೆ ಸರಿಯಲ್ಲ. ನಂತರ ನರೇಂದ್ರರವರು ಸೈಟ್ ಬೇಡ, ನಾನು ಕೊಟ್ಟಿರುವ ಹಣವನ್ನು ವಾಪಾಸ್ ಕೊಡಿ ಎಂದು ನಾನು ಹೇಳಿರುತ್ತೇನೆ ಎಂದು ತಿಳಿಸಿದ್ದೇನೆ ಎಂದರೆ ಸರಿಯಲ್ಲ. ಆಗ ನಾನು ನರೇಂದ್ರರವರಿಗೆ ರೂ.13,50,000/- ಹಣವನ್ನು ಕಳೆದ 3 ವರ್ಷಗಳ ಹಿಂದೆ ನನ್ನ ಆ್ಯಕ್ಸಿಸ್ ಬ್ಯಾಂಕ್, ಮೈಸೂರು, ಕುವೆಂಪುನಗರ ಶಾಖೆಯಲ್ಲಿ ಇರುವ ನನ್ನ ಶಾಖೆಯಿಂದ ನರೇಂದ್ರರವರ ಕರ್ನಾಟಕ ಬ್ಯಾಂಕ್ ಕಳಸಾ ಶಾಖೆಗೆ ವರ್ಗಾವಣೆ ಮಾಡಿರುತ್ತೇನೆ ಎಂದು ಹೇಳಿರುತ್ತೇನೆ ಎಂದರೆ ಸರಿಯಲ್ಲ. ಉಳಿದ 5 ಲಕ್ಷ ಹಣವನ್ನು ಕೊಡಬೇಕಾಗಿರುತ್ತದೆ ಎಂದು ನಾನು ಹೇಳಿರುತ್ತೇನೆ ಎಂದರೆ ಸರಿಯಲ್ಲ. ನಂತರ ನನಗೆ ಮೈಸೂರಿನಲ್ಲಿ ಸರಿಯಾಗಿ ಕೆಲಸ ಸಿಗದೇ ಇದ್ದುದರಿಂದ ಹಣವನ್ನು ನರೇಂದ್ರರವರಿಗೆ ಕೊಡಲು ಸಾಧ್ಯವಾಗಿರುವುದಿಲ್ಲ ಎಂದು ಹೇಳಿರುತ್ತೇನೆ ಎಂದರೆ ಸರಿಯಲ್ಲ. ಆಗ ನರೇಂದ್ರರವರು ಈ ಹಿಂದೆ ಚಿಕ್ಕಮಗಳೂರು ಜಿಲ್ಲಾ ಎಸ್.ಪಿ ಸಾಹೇಬರಿಗೆ ಹಣವನ್ನು ಕೊಡಿಸಿಕೊಡುವ ಬಗ್ಗೆ ನನ್ನ ಮೇಲೆ ಮೌಖಿಕವಾಗಿ ಹೇಳಿದ್ದರಿಂದ ಎಸ್.ಪಿ ಸಾಹೇಬರು ನನ್ನನ್ನು ಕರೆಯಿಸಿ ವಿಚಾರಣೆ ಮಾಡಿದ್ದು ಆ ಸಮಯದಲ್ಲಿ ನರೇಂದ್ರರವರು 5 ಲಕ್ಷ ಅಸಲು ಹಣ, 15 ಲಕ್ಷ ಬಡ್ಡಿ ಹಣ ಒಟ್ಟು 20 ಲಕ್ಷ ಕೊಡಬೇಕು ಎಂದು ಎಸ್.ಪಿ ಸಾಹೇಬರಲ್ಲಿ ಹೇಳಿದಾಗ ನಾನು ಸಾಹೇಬರಿಗೆ ಈಗಾಗಲೇ ರೂ.13,50,000/- ಹಣವನ್ನು ನೀಡಿರುತ್ತೇನೆ, 5 ಲಕ್ಷ ಹಣವನ್ನು ಕೊಡಬೇಕಾಗಿರುತ್ತದೆ ಎಂದು ಹೇಳಿದಾಗ ಎಸ್.ಪಿ ಸಾಹೇಬರು 20 ಲಕ್ಷ

ಕೊಡಬೇಕು ಎಂದು ನನ್ನ ಮೇಲೆ ಒತ್ತಡ ಹೇರಿದ್ದರಿಂದ ನಾನು ಆಯಿತು ಎಂದು ಒಪ್ಪಿಕೊಂಡು ಸಿಂಡಿಕೇಟ್ ಬ್ಯಾಂಕ್ ಚೆಕ್, ಕೆ.ಆರ್.ವೃತ್ತ ಮೈಸೂರಿನಲ್ಲಿ ಇರುವ ನನ್ನ ಖಾತೆಯ 2 ಚೆಕ್ಕುಗಳನ್ನು ತಲಾ 10 ಲಕ್ಷಕ್ಕೆ ಬರೆದು ನರೇಂದ್ರರವರ ಹೆಸರಿಗೆ ನೀಡಿರುತ್ತೇನೆ ಎಂದು ಹೇಳಿರುತ್ತೇನೆ ಎಂದರೆ ಸರಿಯಲ್ಲ. ನನಗೆ ಬಲವಂತ ಮಾಡಿದ್ದರಿಂದ ಒಪ್ಪಿಕೊಂಡಿರುತ್ತೇನೆ, ನಾನು ನಿಜವಾಗಿಯೂ ನರೇಂದ್ರರವರಿಗೆ 5 ಲಕ್ಷ ರೂಪಾಯಿ ಕೊಡಬೇಕಾಗಿರುತ್ತದೆ ಎಂದು ಹೇಳಿರುತ್ತೇನೆ ಎಂದರೆ ಸರಿಯಲ್ಲ. ನಂತರ ನಾನು ನರೇಂದ್ರರವರಿಗೆ ನೀಡಿದ 2 ಚೆಕ್ಕುಗಳು ಚೆಕ್ ಬೌನ್ಸ್ ಆಗಿದ್ದರಿಂದ ಅವರು ನನ್ನ ಮೇಲೆ ಚಿಕ್ಕಮಗಳೂರು ಸಿವಿಲ್ ನ್ಯಾಯಾಲಯದಲ್ಲಿ ನನ್ನ ಮೇಲೆ ಚೆಕ್ ಬೌನ್ಸ್ ಕೇಸನ್ನು ದಾಖಲು ಮಾಡಿರುವ ವಿಚಾರ ತಿಳಿಯಿತು ಎಂದು ಹೇಳಿರುತ್ತೇನೆ ಎಂದರೆ ಸರಿ. ಹಾಗೂ ನಾನು ನರೇಂದ್ರರವರಿಗೆ ನನ್ನ ಮೇಲೆ ನ್ಯಾಯಾಲಯದಲ್ಲ ಹಾಕಿರುವ ಚೆಕ್ ಬೌನ್ಸ್ ಕೇಸನ್ನು ವಾಪಾಸ್ ತೆಗೆದುಕೊಳ್ಳಿ ಅಂತ ಯಾವತ್ತೂ ಸಹ ಬೆದರಿಕೆ ಹಾಕಿರುವುದಿಲ್ಲ ಹಾಗೂ ಹೆದರಿಸಿರುವುದಿಲ್ಲ ಎಂದು ಹೇಳಿರುತ್ತೇನೆ ಎಂದರೆ ಸರಿ. ನರೇಂದ್ರರವರು ನನಗೆ ಫೋನ್ ಮಾಡಿ ಕೇಳಿದಾಗ ನಾನು ಅವರಿಗೆ ನನಗೆ ಸರಿಯಾಗಿ ಕೆಲಸ ಇಲ್ಲ, ಹಣದ ಸಮಸ್ಯೆ ತುಂಬಾ ಇದೆ, ಜೀವನ ಮಾಡುವುದೇ ಕಷ್ಟಕರವಾಗಿದೆ, ನಿಮ್ಮ ಹಣವನ್ನು ಆದಷ್ಟು ಬೇಗ ಕೊಡುತ್ತೇನೆ, ಸ್ವಲ್ಪ ಟೈಮ್ ಕೊಡಿ ಎಂದು ಹೇಳಿದಾಗ, ಅವರೂ ಕೂಡಾ ಆಯಿತು ಹಣ ಸಿಕ್ಕಾಗ ಕೊಡಿ ಎಂದು ಹೇಳಿರುತ್ತಾರೆ ಎಂದು ಹೇಳಿದ್ದೇನೆ ಎಂದರೆ ಸರಿಯಲ್ಲ. ನರೇಂದ್ರರವರು ಯಾವ ಕಾರಣಕ್ಕಾಗಿ ಆತ್ಮಹತ್ಯೆ

ಮಾಡಿಕೊಂಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ ಎಂದು ಹೇಳಿದ್ದೇನೆ ಎಂದರೆ ಸರಿ.

ನಾನು  ನರೇಂದ್ರ ಹಾಗೂ ಅವರ ಹೆಂಡತಿಯಾದ ಉಷಾರವರ ವಿರುದ್ಧ ಅವರು ನನ್ನಿಂದ ಬಲವಂತ ಮಾಡಿ ಚೆಕ್ ಅನ್ನು ಪಡೆದುಕೊಂಡಿರುತ್ತಾರೆ ಎಂದು ಮೇಲಿನ ಮೇಲಾಧಿಕಾರಿಗಳಿಗೆ ದೂರನ್ನು ನೀಡಿರುತ್ತೇನೆಯೇ ಎನ್ನುವ ಪ್ರಶ್ನೆಗೆ ಸಾಕ್ಷಿದಾರರು ನಾನು ದೂರನ್ನು ನೀಡಿದ್ದು ಆದರೆ ಅದನ್ನು ಸ್ವೀಕರಿಸಿರುವುದಿಲ್ಲ ಎಂದು ನುಡಿಯುತ್ತಾರೆ. ನಾನು ನಗರ ಪೊಲೀಸ್ ಠಾಣೆಗೆ ಈ ಬಗ್ಗೆ ದೂರನ್ನು ನೀಡಲು ಹೋಗಿದ್ದೆನು. ನಗರ ಠಾಣೆಯಲ್ಲಿ ದೂರನ್ನು ಪಡೆಯದೇ ಇದ್ದಾಗ ನಾನು ಎಸ್.ಪಿ ಕಛೇರಿಗೆ ದೂರನ್ನು ನೀಡಿರುವುದಿಲ್ಲ. ನನ್ನಿಂದ ಎಸ್.ಪಿ ಅಣ್ಣಾಮಲೈರವರು ಬಲವಂತವಾಗಿ ಚೆಕ್ ಕೊಡಿಸಿರುತ್ತಾರೆ ಎನ್ನುವ ಬಗ್ಗೆ ನಾನು ಸದರಿ ಅಣ್ಣಾಮಲೈರವರ ವಿರುದ್ಧ ಸರ್ಕಾರಕ್ಕಾಗಲೀ ಅಥವಾ ಅವರ ಮೇಲಾಧಿಕಾರಿಗಳಿಗಾಗಲೀ ದೂರನ್ನು ನೀಡಿದ್ದೇನೆಯೇ ಎನ್ನುವ ಪ್ರಶ್ನೆಗೆ ಸಾಕ್ಷಿದಾರರು ಸದರಿ ಎಸ್.ಪಿ  ರವರು ಮೇಲಾಧಿಕಾರಿ ಆಗಿದ್ದುದರಿಂದ ಹಾಗೂ ಪ್ರತಾಪ್ ಸಿಂಹರವರ ಪರಿಚಯ ಇದ್ದುದರಿಂದ ನಾನು ಅವರ ವಿರುದ್ಧ ದೂರನ್ನು ನೀಡಲು ಹೋಗಿರುವುದಿಲ್ಲ ಎಂದು ನುಡಿಯುತ್ತಾರೆ. ನನಗೆ ಪ್ರತಾಪ್ ಸಿಂಹರವರೇ ಫೋನ್ ಮಾಡಿರುತ್ತಾರೆ. ಪ್ರತಾಪ್ ಸಿಂಹರವರು ಬಿ.ಎಸ್.ಎನ್.ಎಲ್ ನಿಂದ ನನಗೆ ಫೋನ್ ಮಾಡಿದ್ದು ಆದರೆ ನನಗೆ ನಂಬರ್ ಅನ್ನು ಹೇಳಲು ಆಗುವುದಿಲ್ಲ.

ನಾನು ನನ್ನ ವಕೀಲರ ಮೂಲಕ ಈ ಪ್ರಕರಣದಲ್ಲಿ ವಕಾಲತ್ ಸಲ್ಲಿಸಿದ ನಂತರ ಸದರಿ ಎಸ್.ಪಿ ರವರ ವಿರುದ್ಧ ಸರ್ಕಾರಕ್ಕಾಗಲೀ ಅಥವಾ ಅವರ

ಮೇಲಾಧಿಕಾರಿಗಳಿಗಾಗಲೀ ದೂರನ್ನು ನೀಡಲು ಪ್ರಯತ್ನಪಟ್ಟಿರುವುದಿಲ್ಲ. ನಾನು ಈ ದಿನ ನನ್ನ ಮುಖ್ಯ ವಿಚಾರಣೆಯಲ್ಲಿ ತಿಳಿಸಿದ ವಿಷಯದ ಬಗ್ಗೆ ಈ ಹಿಂದೆ ಎಲ್ಲಿಯೂ ಕೂಡಾ ನಾನು ಹೇಳದೇ ಇದ್ದು ಇದೇ ಮೊದಲಬಾರಿಗೆ ನ್ಯಾಯಾಲಯದ ಮುಂದೆ ಹೇಳುತ್ತಿದ್ದೇನೆ ಎಂದರೆ ಸರಿ. ನಗರ ಠಾಣೆಯಲ್ಲಿ ನನ್ನ ದೂರನ್ನು ವೈಯಕ್ತಿಕವಾಗಿ ಪಡೆದುಕೊಳ್ಳದೇ ಇದ್ದಾಗ ನಾನು ರಿಜಿಸ್ಟರ್ ಪೋಸ್ಟ್ ಮೂಲಕ ಸದರಿ ದೂರನ್ನು ಕಳುಹಿಸಲು ಪ್ರಯತ್ನಪಟ್ಟಿರುವುದಿಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ತಿಳಿಸಿದ ಬಗ್ಗೆ ನನ್ನ ಬಳಿ ಯಾವುದೇ ದಾಖಲೆಗಳು ಇರುವುದಿಲ್ಲ. ನನ್ನ ಬಳಿ ಯಾವುದೇ ದಾಖಲೆ ಇಲ್ಲದಿದ್ದರೂ ಕೂಡಾ ನಾನು ಈ ದಿನ ಸೃಷ್ಟಿಸಿದ ಹೇಳಿಕೆಯನ್ನು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಾನು ನರೇಂದ್ರರವರಿಗೆ 20 ಲಕ್ಷ ಹಣವನ್ನು ಮರುಪಾವತಿ ಮಾಡುವ ಬಗ್ಗೆ 2 ಚೆಕ್ಕುಗಳನ್ನು ನೀಡಿರುತ್ತೇನೆ ಎಂದರೆ ಸರಿ. ನಾನು ಅವರಿಗೆ ಮೋಸ ಮಾಡುವ ಉದ್ದೇಶದಿಂದ ಹಾಗೂ ಈ ಕೇಸಿನಿಂದ ತಪ್ಪಿಸಿಕೊಳ್ಳುವ ಉದ್ದೇಶದಿಂದ ಈ ದಿನ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲಾ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)
ಓಃಹೇಃಕೇಃಸಃಇಃಎಃಒಃ

ಸಹಿ/-
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಸಿ.ಜೆ.ಎಂ.,ಚಿಕ್ಕಮಗಳೂರು.

ಎಸ್ಆರ್ಃ